ಶ್ರೀ ಧರ್ಮಸಿಂಗ್ (ಗೃಹ ಮತ್ತು ಆಣ್ಯಾರಿ ಸಚಿವರು) :

ಅ) ಮಾಹೆ	ಸಂಬಲಗು (ರೂ.ಗಳಲ್ಲಿ)
ಜನವರಿ 1991	7.63.096-00
ಫೆಬ್ರವರಿ 1991	8.00.236-00
ಮಾರ್ಚ್ 1991	8.30.873.60
ಏಪ್ರಿಲ್ 1991	8.83.107-30
ಮೇ 1991	9.54.033-00
ಜೂನ್ 1991	11.57.719-20
ಜುಲೈ 1991	14.06.011-50
ಆಗಸ್ಟ್ 1991	14.65.989-00
ಸೆಪ್ಟೆಂಬರ್ 1991	11.94.656-60
ಅಕ್ಟೋಬರ್ 1991	9.86.395-00
ನವೆಂಬರ್ 1991	11.45.985-00
ಡಿಸೆಂಬರ್ 1991	9.11.554-60
ಒಟ್ಟು	**1,24,99,656-80**

ಆ) ಇಲ್ಲ.

ಇ) ಸಂಚಾರಿ ಪೋಲೀಸರು ಸಾರ್ವಜನಿಕರಿಗೆ ಸಂಚಾರಿ ಅಪರಾಧಗಳ ಬಗ್ಗೆ ತಿಳುವಳಿಕೆ ಕೊಟ್ಟು, ಅವನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತಾರೆ :

(1) ಪ್ರಚಾರ. (2) ಸಂಚಾರಿ ವ್ಯವಸ್ಥೆಯ ಬಗ್ಗೆ ಚಲನಚಿತ್ರ, ಪ್ರದರ್ಶನಗಳನ್ನು ಏರ್ಪಡಿಸುವುದು. (3) ಸಾರ್ವಜನಿಕರಿಗೆ ಸಂಚಾರಿ ನಿಯಮಗಳ ಬಗ್ಗೆ ಪ್ರತಿವರ್ಷ ಸಂಚಾರಿ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ನೀಡುವುದು. (4) ಸಂಚಾರಿ ಸುರಕ್ಷತಾ ಸಪ್ತಾಹಗಳನ್ನು ಆಚರಿಸುವುದು. (5) ಶಾಲಾಮಕ್ಕಳಿಗೆ, ವಿದ್ಯಾರ್ಥಿ ಸಂಘಸಂಸ್ಥೆಗಳ ಮೂಲಕ ಸಂಚಾರಿ ನಿಯಮಗಳ ಬಗ್ಗೆ ತರಬೇತಿ ನೀಡುವುದು.

ಬೆಂಗಳೂರು ಜಲಮಂಡಲಿಯ ಸಂಚಾರಿ ಶುಲ್ಕ ಪಾವತಿ

18.11. ಶ್ರೀ ಪರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜನತೆಯಿಂದ ನೀರಿನ ಬಿಲ್‌ಗಳ ಹಣ ಪಾವತಿ ಮಾಡಲು ಬೆಂಗಳೂರು ಜಲ ಮಂಡಲಿಯು ಸಂಚಾರಿ ಶುಲ್ಕ ಪಾವತಿ ಮಾಡುವ ವ್ಯವಸ್ಥೆ ಇದೆಯೇ?

ಆ) ಇಲ್ಲದೆ ಹೋದಲ್ಲಿ ಸರ್ಕಾರವು ಸಂಚಾರಿ ಶುಲ್ಕ ಪಾವತಿ ಮಾಡುವ ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ.

ಆ) ಸೇವಾ ಠಾಣೆಗಳಲ್ಲಿ ಹಣ ವಸೂಲಿ ಮಾಡುವ ಕೌಂಟರ್‌ಗಳಿವೆ. ಇದಲ್ಲದೆ ಉಪ ವಿಭಾಗಗಳಲ್ಲಿಯೂ ಹಣ ವಸೂಲಿ ಮಾಡುವ ಕೌಂಟರ್‌ಗಳಿವೆ. ಪ್ರಸ್ತುತ ಕಾರ್ಯಾಚರಣೆ ವ್ಯವಸ್ಥೆಯಿಂದ ಸಂಚಾರಿ ಶುಲ್ಕ ಪಾವತಿ ಮಾಡುವ ಕೇಂದ್ರಗಳನ್ನು ಕರೆಯುವ ಅವಶ್ಯಕತೆ ಇಲ್ಲ. ಸಾರ್ವಜನಿಕ ಬೇಡಿಕೆಯನ್ನು ನಿರ್ವಹಿಸಲು ಪ್ರಸ್ತುತ ಹಣ ವಸೂಲಿ ಕೌಂಟರ್‌ಗಳು ಸಾಕಾಗಿದೆ.

ಜಯನಗರ ವಿಧಾನ ಸಭೆ ಕ್ಷೇತ್ರದಲ್ಲಿರುವ ಕೊಳಚೆ ಪ್ರದೇಶದ ಅಭಿವೃದ್ಧಿ

1767. ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92ರ ಸಾಲಿನಲ್ಲಿ ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ ಖರ್ಚು ಮಾಡಿರುವ ಹಣವೆಷ್ಟು? (ಏಪ್ರಿಲ್ 1991 ರಿಂದ ಜನವರಿ 92ರ ಅಂತ್ಯದವರೆಗೆ);

ಆ) ತೆಗೆದುಕೊಂಡಿರುವ ಅಭಿವೃದ್ಧಿ ಕಾಮಗಾರಿಯ ರೀತಿ ಹೇಗೆ?

ಇ) ಈ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಂಡಿದ್ದ ಸ್ಥಳಗಳು ಯಾವುವು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ರೂ. 13.06 ಲಕ್ಷಗಳು

ಆ) ಷೇವಿಂಗ್, ಸ್ಯಾನಿಟರಿ, ರಿಟೈನಿಂಗ್ ವಾಲ್, ಸ್ಟಾರಮ್ ವಾಟರ್ ಡ್ರೈನ್ ಮತ್ತು ಸುಲಭ ಶೌಚಾಲಯ ಹಾಗೂ ಆರ್ಥಿಕವಾಗಿ ಹಿಂದುಳಿದವರಿಗಾಗಿ ವಸತಿಗಳ ನಿರ್ಮಾಣ.

ಇ) 1) ಸರ್ವೆ ನಂ. 66. ಆಡುಗೋಡಿ

2) ಸರ್ವೆ ನಂ. 7. ತಾವರೆಕೆರೆ

3) ಸರ್ವೆ ನಂ. 5. ತಾವರೆಕೆರೆ

4) ಲಾಲ್‌ಬಾಗ್ ಸಿದ್ದಾಪುರ ಮತ್ತು

5) ಶಾಸ್ತ್ರಿನಗರ.